ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಹಾಗೂ ವಿಶೇಷ ನ್ಯಾಯಾಧೀಶರು ಚಿಕ್ಕಮಗಳೂರು

# ವಿಶೇಷ ಪ್ರಕರಣ ಸಂಖ್ಯೆ: 111/2025

ಫಿರ್ಯಾದುದಾರರು: ತರೀಕೆರೆ ಪೋಲಿಸ್ ಠಾಣೆ ಚಿಕ್ಕಮಗಳೂರು ಜಿಲ್ಲೆ

-ವಿರುದ್ಧ-

ಆರೋಪಿತರು: ಸಂದೇಶ್ ಆರ್

. . . . .

-ದೋಷಾರೋಪಣೆ-

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್‌ಎಲ್.ಎಂ., ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ವಿಶೇಷ ನ್ಯಾಯಾಧೀಶರು, ಚಿಕ್ಕಮಗಳೂರು ಆದ ನಾನು, ಈ ಕೆಳಕಂಡ ಆರೋಪಿತರಾದ:-

ಸಂದೇಶ್ ಆರ್<br>
ಬಿನ್ ರಾಜ<br>
18 ವರ್ಷ ಮರಗೆಲಸ<br>
ವಾಸ: ಗುಡ್ಡದಟ್ಟಿ ಗ್ರಾಮ<br>
ಎಂ.ಸಿ.ಹಳ್ಳಿ , ತರೀಕೆರೆ

ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆ:

ದಿನಾಂಕ: 12.10.2025 ರಂದು ಮದ್ಯಾಹ್ನ 3.30 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲೂಕು , ತರೀಕೆರೆ ಪೋಲಿಸ್ ಠಾಣಾ ವ್ಯಾಪ್ತಿಯ ಗುಡ್ಡದಟ್ಟಿ ಗ್ರಾಮದ ಸರ್ವೆ ಸಂಖ್ಯೆ 13 ರಲ್ಲಿರುವ ಸರ್ಕಾರಿ ಗೋಮಾಳದಲ್ಲಿ ಆರೋಪಿಯಾದ ನೀವು ಕ್ರಮವಾಗಿ 40 ಸೆಂಟಿಮಿಟರ್ , 57 ಸೆಟಿಮಿಟರ್ , 60 ಸೆಂಟಿಮಿಟರ್ ಮತ್ತು 37 ಸೆಂಟಿಮಿಟರ್ ಉದ್ದವಿರುವ , ಒಟ್ಟು 800 ಗ್ರಾ ತೂಕದ, ಒಟ್ಟು ನಾಲ್ಕು ಗಾಂಜಾ ಸೊಪ್ಪಿನ ಗಿಡಗಳನ್ನು ಕಾನೂನು ಬಾಹಿರವಾಗಿ

ಬೆಳೆದಿದ್ದು ಈ ಮೂಲಕ ಎನ್.ಡಿ.ಪಿ.ಎಸ್. ಕಾಯ್ದೆ ಕಲಂ 20(a)(i) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ಮತ್ತು ವಿಶೇಷ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳಿಗೆ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 12 ನೇ ದಿವಸ ಜನವರಿ ಮಾಹೆಯ 2026 ನೇ ಇಸವಿಯಂದು.

ಸಹಿ

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>ಆರೋಪಿಯ ಆಪಾದನೆ</u>

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:ತಿಳಿಯಿತು

ಪ್ರಶ್ನೆ -2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ತಪ್ಪು ಮಾಡಿಲ್ಲ . ವಿಚಾರಣೆಯಾಗಬೇಕು

(ದಿನಾಂಕ 12 ನೇ ದಿವಸ ಜನವರಿ ಮಾಹೆಯ 2026 ರಂದು ತೆರೆದನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

ಸಹಿ
*(ರಾಜೇಶ್ವರಿ ಎನ್. ಹೆಗಡೆ )*
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು